ಎಂದು ಫಿಕ್ಸ್ ಮಾಡಿಬಿಡುತ್ತಾರೆ. ಅವನು ಕಂಪ್ಲೀಟ್ ಎರಡು ಎಕರೆಗಳಿಗೆ 4 ಕೋಟಿ, 3 ಕೋಟಿ ರೂಪಯಿಗಳ ಪ್ರಾಜೆಕ್ಟ್‌ನ್ನು ತಯಾರು ಮಾಡಿ ಬಿಡುವುದು. ಅವರಿಗೂ ಎನ್.ಹೆಚ್.ಬಿ. ಯವರಿಗೂ ಹೊಂದಾಣಿಕೆಯನ್ನು ಮಾಡಿಕೊಂಡಿರುವುದು. ಆಮೇಲೆ ಆ ಹಣವನ್ನು ರಿಲೀಜ್ ಮಾಡಿಕೊಂಡು ಹೋಗುತ್ತಿರುವುದು. ಇಲ್ಲಿ ಬಡ ರೈತರ ಬಗ್ಗೆ ಚಿಂತೆ ಮಾಡುವಂತಹ ವ್ಯವಸ್ಥೆ ಇಲ್ಲ. ನಾನು ಇದನ್ನು ಖಂಡಿತವಾಗಿಯೂ ಕೂಡ, ಪರಿಗಣಿಸಿ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ. ಬಹುಶಃ ಇನ್ನು ಮುಂದೆ ಬರುವಂತಹ, ನಮ್ಮಲ್ಲಿರುವಂತಹ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ಸ್ ಅವರು ಹತ್ತತ್ತು ಜನರನ್ನು ಕರೆದುಕೊಂಡು ಬರುವಂತಹ ವ್ಯವಸ್ಥೆಯನ್ನು ಮಾಡುವಂತಹ ವಿಚಾರವನ್ನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ ಏನೇನು ಸೌಲಭ್ಯಗಳನ್ನು ಕೇಂದ್ರ ವಲಯದಿಂದ ಹಾಗೂ ರಾಜ್ಯ ವಲಯದಿಂದ ಕೊಡುತ್ತಿದ್ದೇವೆ ಎಂಬುದರ ಬಗ್ಗೆ ಕೂಡ ನಾನು ವಿವರವಾಗಿ ಉತ್ತರದಲ್ಲಿ ತಿಳಿಸಿದ್ದೇನೆ. ಇನ್ನು ಮುಂದೆ ಕೂಡ "ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್" ಒಂದು ಬರುತ್ತಾ ಇದೆ. ಇದರಲ್ಲೂ ರೈತರಿಗೆ ಸೌಲಭ್ಯವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡೋಣ. ಇನ್ನು ಮ್ಯಾಕ್ರೋ ಮ್ಯಾನೇಜ್‌ಮೆಂಟ್ ಎಂದು 21 ಕೋಟಿ ರೂಪಾಯಿಗಳನ್ನು ಕೊಡುವಂಥಾದ್ದು, ಮತ್ತು ಎಲ್ಲಾ ಗಿಡಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದು; 40 ಲಕ್ಷ ಗಿಡಗಳನ್ನು ಈಗಾಗಲೇ ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದು ಬಹುಶಃ ಪ್ರತಿಯೊಬ್ಬ ಶಾಸಕರಿಗೂ ಇದು ತಲುಪಿರಬಹುದು. ನಮ್ಮ ಡಿಪಾರ್ಟ್‌ಮೆಂಟ್‌ನವರು ಕಳುಹಿಸಿದ್ದಾರೆ, ನಾನೂ ಕಳುಹಿಸುತ್ತಿದ್ದೇನೆ. ಪ್ರತಿಯೊಂದು ತಾಲ್ಲೂಕಿಗೂ ಕೂಡ ಕನಿಷ್ಠ 5 ಸಾವಿರದಿಂದ 10 ಸಾವಿರ, 15 ಸಾವಿರ ಗಿಡಗಳನ್ನು ಉಚಿತವಾಗಿ ಕೊಡುವುದಕ್ಕೆ ಪ್ರತಿಯೊಬ್ಬರಿಗೂ ಈಗಾಗಲೇ ಮಾಹಿತಿಯನ್ನು ಕಳುಹಿಸಿದ್ದೇನೆ. ಡಿಪಾರ್ಟ್‌ಮೆಂಟ್‌ನವರು ಕಳಿಸುತ್ತಿದ್ದಾರೆ ನಾನು ಕೂಡ ಕಳುಹಿಸುತ್ತಿದ್ದೇವೆ. ಈಗಾಗಲೇ ಗಿಡಗಳ ವಿತರಣೆಯ ಕೆಲಸವೂ ಪ್ರಾರಂಭವಾಗಿದೆ. ಇನ್ನು ಮಾರುಕಟ್ಟೆಯ ಬಗ್ಗೆ ಈಗ ಸಫಲ್ ಹಾಗೂ ಹಾಫ್‌ಕಾಮ್ಸ್ ಏನು ಇದೆ, ಇದನ್ನು ಇನ್ನು ಹೆಚ್ಚು ಸ್ಟ್ರೆಂಗ್ದನ್ ಮಾಡುವುದಕ್ಕೆ ಚಿಂತನೆ ಮಾಡುತ್ತಿದ್ದೇವೆಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ ಬೆಂಗಳೂರಿನಲ್ಲಿ ಇದರ ಲಾಭವನ್ನು ಪಡೆದುಕೊಂಡಿರುವವರು ಯಾರ್ಯಾರೆಂಬ ಮಾಹಿತಿ ನಿಮ್ಮ ಹತ್ತಿರ ಇದೆಯಾ?

ಶ್ರೀ ಆರ್. ಶ್ರೀನಿವಾಸ್ : ಆ ಮಾಹಿತಿ ಇಲ್ಲ.

ದೇವನಹಳ್ಳಿ ತಾಲ್ಲೂಕಿನಲ್ಲಿ ಶೀತಲ ಕೇಂದ್ರವನ್ನು ತೆರೆಯಲು ಉದ್ದೇಶ

602(6536) : ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಶೀತಲ ಕೇಂದ್ರವನ್ನು ತೆರೆಯಲು ಉದ್ದೇಶ ಸರ್ಕಾರಕ್ಕಿದೆಯೆ.

ಆ) ದೇವನಹಳ್ಳಿ ತಾಲ್ಲೂಕಿನಲ್ಲಿ ಇಲಾಖೆಗೆ ಸೇರಿದ ಕಛೇರಿಗಳನ್ನು ದುರಸ್ತಿ ಮಾಡಲು ಕ್ರಮ ಏನಾದರೂ ತೆಗೆದುಕೊಳ್ಳಲಾಗಿದೆಯೆ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು):

ಅ) ಸರ್ಕಾರಿ ವಲಯದಡಿ ಶೀತಲಗೃಹ ಸ್ಥಾಪಿಸುವ ಉದ್ದೇಶ ಇರುವುದಿಲ್ಲ. ಆದರೆ ಶೀತಲಗೃಹ ಸ್ಥಾಪಿಸಲು ಮುಂದೆ ಬರುವವರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಬಗ್ಗೆ ಭಾರತ ಸರ್ಕಾರದ ರಾಷ್ಟ್ರೀಯ ತೋಟಗಾರಿಕೆ ಮಂಡಳಿ ವತಿಯಿಂದ ತೋಟಗಾರಿಕೆ ಉತ್ಪನ್ನಗಳಿಗೆ ಶೀತಲಗೃಹ/

ಉಗ್ರಾಣಗಳ ನಿರ್ಮಾಣ/ವಿಸ್ತರಣೆ/ಆಧುನಿಕರಣಕ್ಕಾಗಿ ಬಂಡವಾಳ ವಿನಿಯೋಗ ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ. ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಶೀತಲಗೃಹಗಳು ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ. 1 ರ ಸಹಾಯಧನ ನೀಡಲಾಗುತ್ತಿದೆ.

ಆ) ಹೌದು.

ದೇವನಹಳ್ಳಿಯಲ್ಲಿರುವ ತೋಟಗಾರಿಕೆ ಇಲಾಖೆ ಕಛೇರಿ ಕಟ್ಟಡದ ದುರಸ್ತಿ ಹಾಗೂ ವಿದ್ಯುತ್ ಸಂಪರ್ಕದ ದುರಸ್ತಿಗಾಗಿ ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಜಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೇ, ನಾನು ಮೊದಲನೆಯ ಪ್ರಶ್ನೆ ದೇವನಹಳ್ಳಿ ತಾಲ್ಲೂಕಿನಲ್ಲಿ ಶೀತಲ ಕೇಂದ್ರವನ್ನು ತೆಗೆಯಲು ಉದ್ದೇಶ ಸರ್ಕಾರಕ್ಕೆ ಇದೆಯೇ? ಎಂದು ಕೇಳಿದ್ದೇನೆ. ಎರಡನೆಯದಾಗಿ ದೇವನಹಳ್ಳಿ ತಾಲ್ಲೂಕಿನಲ್ಲಿ ಇಲಾಖೆಗೆ ಸೇರಿದ ಕಛೇರಿಗಳನ್ನು ದುರಸ್ತಿ ಮಾಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಇದು ಬಹಳ ಅನ್ಯಾಯವಾಗಿರುವಂಥಾದ್ದು. ಇದರ ಬಗ್ಗೆ ಮಾನ್ಯ ಸಚಿವರು, ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಈ ಶೀತಲ ಕೇಂದ್ರಗಳನ್ನು ಸರ್ಕಾರದಿಂದ ಕೊಡಲು ಚಿಂತನೆಯನ್ನು ಮಾಡುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ಕೆಲವು ಕಡೆಗಳಲ್ಲಿ ಇವುಗಳನ್ನು ಸರ್ಕಾರದ ವತಿಯಿಂದ ಮಾಡಿ, ನಮ್ಮ ಇಲಾಖಾವತಿಯಿಂದ ಮಾಡಿದ್ದು, ಇವು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇದು ಚಿಕ್ಕಬಳ್ಳಾಪುರದಲ್ಲಿದೆ, ಬೆಂಗಳೂರಿನಲ್ಲಿ ಇದೆ, ಕೋಲಾರದಲ್ಲಿ ಇದೆ. ಇನ್ನೂ ಅನೇಕ ಕಡೆಗಳಲ್ಲಿ ಅವುಗಳು ಈಗ ಚಾಲನೆಯಲ್ಲಿ ಇಲ್ಲ. ಆದುದರಿಂದ ಈ ಬಗ್ಗೆ ಖಾಸಗೀ ಅಥವಾ ಸಹಕಾರ ಸಂಘಗಳ ಮೂಲಕ, ತಾವು ಬಂದರೆ ಶೇ. 25 ರಿಂದ ಶೇ. 50 ರಷ್ಟು ಸಬ್ಸಿಡಿಯನ್ನು ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಅದೂ ಅಲ್ಲದೆ ಅಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗುತ್ತಿರುವುದರಿಂದ, ಅಲ್ಲಿ ಹೆಚ್ಚಿನ ರೀತಿಯಲ್ಲಿ ಹೊರದೇಶಗಳಿಗೆ ಕಳುಹಿಸುವುದಕ್ಕೆ, ಈ ಫ್ಲೋರಿಕಲ್ಚರ್ ಬಗ್ಗೆ, ತರಕಾರಿಗಳನ್ನು ಕಳುಹಿಸುವಂಥಾದ್ದಕ್ಕೆ ಈಗಾಗಲೇ, 50 ಎಕರೆ ಜಮೀನನ್ನು ಮಾನ್ಯ ಕೈಗಾರಿಕಾ ಮಂತ್ರಿಯವರು ಮಂಜೂರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ವ್ಯವಸ್ಥೆಯನ್ನು ಮಾಡಿ ಶೀತಲ ಕೇಂದ್ರಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡೋಣ. ಈಗ ರೈತರಿಗೆ ಕೊಡುವಂತಹ ವ್ಯವಸ್ಥೆ ಇಲ್ಲ. ಇನ್ನು ಕಟ್ಟಡಗಳನ್ನು ದುರಸ್ತಿ ಮಾಡುವ ಬಗ್ಗೆ ಈಗಾಗಲೇ 50 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದು ಬಿಡುಗಡೆಯಾದ ತಕ್ಷಣ ಯಾವ್ಯಾವುದು ದುರಸ್ತಿ ಇದೆ ಅದನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜಿ. ಚಂದ್ರಣ್ಣ : ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಲಿಲ್ಲ. ದೇವನಹಳ್ಳಿಯಲ್ಲಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವಾಗುವುದರಿಂದ, ಫ್ಲೋರಿಕಲ್ಚರ್ ಮತ್ತು ಬೇರೆಬೇರೆ ತರಕಾರಿಗಳನ್ನು ಎಕ್ಸ್‌ಪೋರ್ಟ್ ಮಾಡಲು ನಮಗೆ ವಿಫುಲವಾದ ಅವಕಾಶಗಳಾಗಬಹುದು. ಆದ್ದರಿಂದ, ಆ ಬಗ್ಗೆ ದೂರದೃಷ್ಟಿ ಇಟ್ಟುಕೊಂಡು ಕೋಲ್ಡ್ ಸ್ಟೋರೇಜ್ ತೆರೆಯಲು ತೋಟಗಾರಿಕಾ ಇಲಾಖೆಯವರು ಏನಾದರೊಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಖಾಸಗಿಯವರು ಅಥವಾ ಬೇರೆಯವರ ಮೂಲಕ ಮಾಡಿಸಿದರೆ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಾರೆ, ಅದು ನಮಗೆ ಗೊತ್ತು. ಆದರೆ ನಾನು ಹೇಳುವಂಥಾದ್ದೇನೆಂದರೆ, ಅಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಗುತ್ತಿರುವುದರಿಂದ, ಅಲ್ಲಿ ಕೆಲವರು ಜಮೀನು

ಕಳೆದುಕೊಳ್ಳುವುದನ್ನು ಬಿಟ್ಟರೆ, ಉಳಿದಂಥವರೆಲ್ಲರೂ ಹೂವನ್ನು ಬೆಳೆಯುವಂಥಾದ್ದು, ಮಾವನ್ನು ಬೆಳೆಯುವಂಥಾದ್ದು, ಇದೆಲ್ಲಾ ಹೆಚ್ಚಿಗೆ ಇಟ್ಟುಕೊಂಡಿರತಕ್ಕಂಥವರು. ಅಲ್ಲದೇ, ಇಲ್ಲಿ ವಿಶೇಷವಾಗಿ ಆಲೂಗಡ್ಡೆ, ಈರುಳ್ಳಿ, ಈ ರೀತಿಯ ಅನೇಕ ತೋಟಗಾರಿಕಾ ಬೆಳೆಗಳನ್ನು ಹೆಚ್ಚಿಗೆ ಬೆಳೆಯುವುದರಿಂದ, ತಾವು ಇದರ ಬಗ್ಗೆ ನಿಖರವಾಗಿ ಆಶ್ವಾಸನೆಯನ್ನು ನಮಗೆ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಆರ್. ಶ್ರೀನಿವಾಸ್ : ಸನ್ಮಾನ್ಯ ಅಧ್ಯಕ್ಷರೇ, ನಿಜ. ನಾನು ಆಗಲೇ ಹೇಳಿದ ಹಾಗೆ, ನಮ್ಮ ಕೈಗಾರಿಕಾ ಮಂತ್ರಿಗಳು 50 ಎಕರೆ ಕೊಡುತ್ತೇವೆ ಎಂದು ಕೂಡ ಒಪ್ಪಿಕೊಂಡಿದ್ದಾರೆ. ಅಂಥ ಪರಿಸ್ಥಿತಿಯಲ್ಲಿ ಒಂದು ಶೀತಲ ಕೇಂದ್ರವನ್ನು ನಿರ್ಮಾಣ ಮಾಡಲು ನಾವು ಈಗಾಗಲೇ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ, ದೇವನಹಳ್ಳಿಯಲ್ಲಿ ಏನಾಗಿದೆ ಎಂದರೆ, ಅಲ್ಲಿ ಜಮೀನು ಒಂದೊಂದು ಎಕರೆ ಒಂದೊಂದು ಕೋಟಿ ರೂಪಾಯಿಗಳಿಗೆ ಹೋಗುತ್ತಿದೆ. ಆದ್ದರಿಂದ, ಅಲ್ಲಿ ಯಾರೂ ಮಾವಿನ ಗಿಡಗಳನ್ನಾಗಲೀ, ತೆಂಗಿನ ಗಿಡಗಳನ್ನಾಗಲೀ ನಾಟಿ ಮಾಡಲು ಮುಂದೆ ಬರುವುದಿಲ್ಲ. ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಜಮೀನಿನಲ್ಲಿ ಏಕೆ ಬೆಳೆಯನ್ನು ಬೆಳೆಯಬೇಕೆಂದು ಹೇಳಿ, ಹೆಚ್ಚಿನ ರೈತರೆಲ್ಲರೂ ಕೂಡ ತಮ್ಮ ಜಮೀನನ್ನು ಮಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ತೋಟ ಮಾಡಲು, ಬೆಳೆಗಳನ್ನು ಬೆಳೆಯಲು ಮುಂದೆ ಬರುತ್ತಿಲ್ಲ. ಆದ ಕಾರಣ ಆ ರೀತಿ ಬೆಳೆ ಬೆಳೆಯಲು ಆಸಕ್ತಿ ಇರತಕ್ಕಂಥ ರೈತರು ಬಂದರೆ, ಅವರ ತಾಲ್ಲೂಕಿಗೆ ಕೂಡ ನಾನು ಈಗಾಗಲೇ 10 ಸಾವಿರ ಗಿಡಗಳನ್ನು ಕೊಟ್ಟಿದ್ದೇನೆ. ಆಸಕ್ತಿ ಇರತಕ್ಕಂಥವರಿಗೆ ಇನ್ನು ಮುಂದೆಯೂ ಏನು ಸಹಾಯ ಬೇಕಾದರೂ ಮಾಡಲು ಸಿದ್ಧವಾಗಿದ್ದೇನೆ. ಆದರೆ, ಬಹುತೇಕ ರೈತರೆಲ್ಲರೂ ಜಮೀನನ್ನು ಮಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ಬೆಳೆ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ. ಚಂದ್ರಣ್ಣ : ಎಲ್ಲರೂ ಜಮೀನನ್ನು ಮಾರಲು ಹೋಗುತ್ತಿದ್ದಾರೆ ಎನ್ನುವುದು ತಪ್ಪು ಮಾಹಿತಿ. ಮಾನ್ಯ ಸಚಿವರು ಮಾಹಿತಿಯನ್ನು ಸರಿಯಾಗಿ ತರಿಸಿಕೊಳ್ಳಿ. ಎಲ್ಲರೂ ಜಮೀನನ್ನು ಮಾರುತ್ತಿಲ್ಲ. ಯಾರೋ ಕೆಲವರು, ರೋಡ್ ಸೈಡ್‌ನಲ್ಲಿದ್ದಂಥವರು ಮಾರಿದ್ದಾರೆ. ಒಂದು ಎಕರೆಗೆ ಒಂದು ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ. ಇನ್ನೂ 40–50 ಲಕ್ಷ ರೂಪಾಯಿಗೇ ಆಗಿಲ್ಲ. ಸುಮ್ಮನೆ ಯಾರೋ ಏನೋ ಹೇಳುವುದನ್ನು ಕೇಳಿಕೊಂಡು, ಇಲ್ಲಿ ದಯವಿಟ್ಟು ತಪ್ಪು ಮಾಹಿತಿಯನ್ನು ಕೊಡುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬೇರೇನೂ ಮಾಡುವುದಕ್ಕೆ ಆಗುವುದಿಲ್ಲ. ನೀವಿಬ್ಬರೂ ಭಾವ ಮತ್ತು ಭಾವಮೈದುನರು ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿಯೇ ಮುಂದುವರೆದರೆ, ರೈತರು ಗ್ಯಾರಂಟಿ ತಮ್ಮ ಜಮೀನನ್ನು ಮಾರಿಕೊಳ್ಳಬೇಕಾಗುತ್ತದೆ. ಅವರು ಬೇರೇನೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಜಿ. ಚಂದ್ರಣ್ಣ : 20 ಸಾವಿರ ಹೆಕ್ಟೇರ್ ಜಮೀನು ಇರತಕ್ಕಂಥಾದ್ದರಲ್ಲಿ ಕೇವಲ 5–6 ಸಾವಿರ ಎಕರೆ ಜಮೀನನ್ನು ಮಾರಿಕೊಂಡು ಬಿಟ್ಟರೆ, ಇನ್ನು ಉಳಿದವರು ಏನಾಗಬೇಕು? ಆದ್ದರಿಂದ ನೀವು ದಯಮಾಡಿ ಇದನ್ನು ಮಾಡಿಕೊಡಬೇಕು, ಇದು ಅವಶ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಶ್ರೀ ಆರ್. ಶ್ರೀನಿವಾಸ್ : ಆಯಿತು.